ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ ೩ನೇ ಸೆಪ್ಟೆಂಬರ್ ೧೯೯೩, ಬಾದ್ರಪದ, ಶಕ ೧೯೧೫

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯.೪೦ ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು : (ಶ್ರೀ ವಿ. ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಹಾಸನ ನಗರಸಭೆಯಲ್ಲಿ ಅವ್ಯವಹಾರ

609 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಾಸನ ನಗರ ಸಭೆಯನ್ನು ಸರ್ಕಾರವು ಸೂಪರ್‌ಸೀಡ್ ಮಾಡಿರುವುದು ನಿಜವೇ? ಹಾಗಿದ್ದಲ್ಲಿ ಯಾವಾಗ?*

ಆ) *ಈ ರೀತಿ ಸೂಪರ್‌ಸೀಡ್ ಮಾಡಲು ಕಾರಣವೇನು? ವಿವರ ಕೊಡಿ?*

ಇ) *ಸೂಪರ್‌ಸೀಡ್ ಆದ ಮೇಲೆ ನಗರಸಭೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಹೌದು, ಸರ್ಕಾರದ ಆದೇಶ ಸಂಖ್ಯೆ ವನಇ 17 ಟಿಎಂಓ 91 ದಿನಾಂಕ 20.3.93ರಲ್ಲಿ ಸೂಪರ್‌ಸೀಡ್ ಮಾಡಿದೆ

ಆ) ಅನುಬಂಧ -1 ವಿವರಿಸಲಾಗಿದೆ

ಇ) ಅನುಬಂಧ -2 ವಿವರಿಸಲಾಗಿದೆ.

ಅನುಬಂಧ-1

ಹಾಸನ ನಗರಸಭೆಯನ್ನು ಸೂಪರ್‌ಡಿ ಮಾಡಲು ಕಾರಣಗಳು ಈ ಕೆಳಗಿನಂತಿವೆ.

1) ನಿವೇಶನ ಮಂಜೂರಾತಿ ಹಾಗೂ ಖಾತೆ ಬದಲಾವಣೆಗೆ ಸಂಬಂಧಿಸಿದಂತೆ ಒಂಬತ್ತು ಪ್ರಕರಣಗಳಲ್ಲಿ ನಿಯಮ ಬಾಹಿರವಾಗಿ ಮಂಜೂರಾತಿ ನೀಡಿದ್ದು.

2) ಒಂದು ಪ್ರಕರಣದಲ್ಲಿ ಶೇಕಡಾ 18ರ ದುರ್ಬಳಕೆ ಸಂಬಂಧಿಸಿದ್ದು.

3) ನಗರಸಭೆಯ ವ್ಯಾಪ್ತಿಯಲ್ಲಿರುವ ಬಸ್‌ಸ್ಟ್ಯಾಂಡಿನಲ್ಲಿ ಆರ್.ಸಿ.ಸಿ. ಚರಂಡಿ ನಿರ್ಮಾಣದ ಕಾಮಗಾರಿಯಲ್ಲಿ ಆಗಿರುವ ನ್ಯೂನ್ನತೆ

4) ನಗರಸಭೆಗೆ ಸೇರಿದ ಅಂಗಡಿ ಮತ್ತು ಖಾಲಿ ಜಾಗವನ್ನು ಗುತ್ತಿಗೆ ಕೊಡುವ ಬಗ್ಗೆ ಮೂರು ಪ್ರಕರಣಗಳಲ್ಲಿ ನಿಯಮ ಬಾಹಿರವಾಗಿ ಮಂಜೂರಾತಿ ನೀಡಿದ್ದು

ಅನುಬಂಧ-2

ಕಾನೂನು ಉಲ್ಲಂಘನೆ ಮಂಜೂರು ಮಾಡಿರುವ ನಿವೇಶನಗಳಲ್ಲಿ ಕಟ್ಟಡಗಳನ್ನು ಕಟ್ಟಲು ಪರವಾನಿಗೆ ಕೊಡಕೂಡದೆಂದೂ ಮತ್ತು ಅಕ್ರಮ ಕಟ್ಟಡಗಳು ಬಾರದಂತೆ ತಡೆಯಲು ಹಾಸನ ನಗರ ಸಭೆಯ ಪೌರಾಯುಕ್ತರಿಗೆ ಪೌರಾಡಳಿತ ನಿರ್ದೇಶಕರು, ಬೆಂಗಳೂರು ಇವರು ತಮ್ಮ ಅರೆ ಸರ್ಕಾರಿ ಪತ್ರ ದಿನಾಂಕ 31.7.93ರಂದು ಸೂಚಿಸಿದ್ದಾರೆ. ನಗರಸಭೆಯ ಸೂಪರ್ಸೀಡ್ ಆದ ಮೇಲೆ ಅಲ್ಲಿ ನಡೆದಿದೆಯೆನ್ನಲಾದ ಅಕ್ರಮಗಳ ಬಗ್ಗೆ ವಿಚಾರಣೆ ನಡೆಸಲು ಅನುಕೂಲವಾಗುವಂತೆ ಸಂಬಂಧಪಟ್ಟ ಅಧಿಕಾರಿ ನೌಕರರಿಗೆ ಕಾರಣ ಕೇಳಿ ನೋಟೀಸ್ನ್ನು ಪೌರಾಡಳಿತ ನಿರ್ದೇಶಕರು ತಮ್ಮ ಪತ್ರ ಸಂಖ್ಯೆ ಡಿಎಂಎ ವಿಚಾರಣೆ (1) ಸಿಆರ್ 32 92-93, ದಿನಾಂಕ 27/28/29-7-93ರಂದು ಕಳಿಸಿದ್ದಾರೆ. ನೋಟೀಸಿಗೆ ಉತ್ತರ ಕೊಡಲು 1993ರ ಆಗಸ್ಟ್ ತಿಂಗಳ ಕೊನೆಯವರೆಗೆ ಕಾಲಾವಕಾಶ ಕೋರಿ ಕೆಲವರು ಪತ್ರ ಬರೆದಿದ್ದಾರೆ. ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೇ, ಹಾಸನ ಪುರಸಭೆಯನ್ನು ಸೂಪರ್ಸೀಡ್ ಮಾಡಬೇಕಾದರೆ ಏನು ಕಾರಣಗಳೆಂದು ತಿಳಿಸಿರುತ್ತೀರಿ. ಮತ್ತೆ ಸೂಪರ್ಸೀಡ್ ಆಗಬೇಕಾದರೆ ಜನಗಳ ಹಿತಕ್ಕೆ ವಿರುದ್ಧವಾಗಿ, ಅಕ್ರಮವಾಗಿ ಸ್ವಲಾಭ ಸಂಪಾದನೆಯ ದೃಷ್ಟಿಯಿಂದ ನೂರಾರು ಅಕ್ರಮಗಳು ನಡೆದಿರುವುದು ನಿಮ್ಮ ಗಮನಕ್ಕೆ ಬಂದಿಲ್ಲವೇ? ಇವು ಸೂಪರ್ಸೀಡಾಗಿ ಆರು ತಿಂಗಳುಗಳಾಗಿವೆ. ನಡೆದಿರತಕ್ಕಂಥ ಅಕ್ರಮಗಳ ಬಗ್ಗೆ ಸೂಕ್ತ ಎನ್ಕ್ವೈರಿ ಮಾಡಿ ಆಕ್ಷನ್ ತೆಗೆದುಕೊಳ್ಳದೇ ಹೋದರೆ ನೀವು ಸೂಪರ್ಸೀಡ್ ಮಾಡಿ ಏನು ಪ್ರಯೋಜನ? ಇದರ ಬಗ್ಗೆ ದಯವಿಟ್ಟು ವಿವರಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೇ, ಈ ಅನುಬಂಧ ಎರಡರಲ್ಲಿ ನಾವು ಏನು ಕ್ರಮ ತೆಗೆದುಕೊಂಡಿರುತ್ತೇವೆ ಎನ್ನುವುದರ ಬಗ್ಗೆ ವಿವರ ಕೊಟ್ಟಿದ್ದೇವೆ. ಅದರಲ್ಲಿ ಯಾರು ಯಾರು ಅಧಿಕಾರಿಗಳು ಸಂಬಂಧಪಟ್ಟಿದ್ದಾರೆ, ಅವರಿಗೆ ಕಾರಣಗಳನ್ನು ಕೇಳಿ ನೋಟೀನ್ನು ಕೊಟ್ಟಿದ್ದೇವೆ. ಅದಕ್ಕೆ ಉತ್ತರ ಬಂದತಕ್ಷಣ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ನಮ್ಮ ಮಾನ್ಯ ಸದಸ್ಯರಾದ ಹನುಮೇಗೌಡರು ಎರಡು ಮೂರು ಸಲ ನನ್ನ ಗಮನಕ್ಕೆ ಈ ವಿಚಾರನ್ನು ತಂದಿದ್ದಾರೆ. ಸೈಟ್ಗಳನ್ನು ಮುನಸಿಪಾಲ್ಟಿಯವರು, ಅವರಿಗೆ ಬರೆದು ಕೊಡತಕ್ಕಂಥದ್ದು, ಆಮೇಲೆ ಕಟ್ಟಡಗಳನ್ನು ಕಟ್ಟುವುದಕ್ಕೆ ಪರವಾನಿಗೆಯನ್ನು ಕೊಡತಕ್ಕಂಥದ್ದು ಇದೆಲ್ಲವನ್ನೂ ತಂದಿರುತ್ತಾರೆ. ಅದಕ್ಕೆ ನಾನು ಈ ಸಂದರ್ಭದಲ್ಲಿ ಈ ಸದನಕ್ಕೆ ತಿಳಿಸುವುದಿಷ್ಟೆ. ಇದನ್ನು ಸಿ.ಓ.ಡಿ.ಗೆ ರೆಫರ್ಮಾಡಿ ಸರಿಯಾದ ರೀತಿಯಲ್ಲಿ ತನಿಖೆ ಮಾಡಿಸಿ ಯಾರು ತಪ್ಪಿತಸ್ಥರಿದ್ದುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೇ, ಅಲ್ಲಿ ನಡೆದಿರತಕ್ಕಂಥ ಅಕ್ರಮಗಳ ಬಗ್ಗೆ ಒಂದು ವಿಧಾನವನ್ನು ಮಾನ್ಯ ಸಚಿವರ ಗಮನಕ್ಕೆ ತರಲು ಇಚ್ಛಿಪಡುತ್ತೇನೆ. ಬಹಳ ಬೆಲೆಯುಳ್ಳತಕ್ಕಂಥ ಸೈಟುಗಳು ಹಾಸನ ಪಟ್ಟಣಗಳಲ್ಲಿ ಇದ್ದವು. ಮುನಿಸಿಪಲ್ ಕೌನ್ಸಿಲರ್ಸ್ ಅಧ್ಯಕ್ಷರು ಮತ್ತು ಕೊಂಡುಕೊಳ್ಳತಕ್ಕಂಥ ಮಂಜೂರು ಮಾಡಿಸಿಕೊಳ್ಳತಕ್ಕಂಥ ಖಾಸಗಿ ಸಾಹುಕಾರ ಒಂದಾಗಿ, ಸಬ್ಜಕ್ಟ್ ಇಟ್ಟು, ಇಂಥ ಸೈಟನ್ನು ಇಂಥವರಿಗೆ ಮಂಜೂರು ಮಾಡಬಹುದು ಎಂದು ನಿರ್ಣಯ ಮಾಡುವುದು. ಆದಾದ ಎರಡು ತಿಂಗಳಾದ ಮೇಲೆ ಅಧ್ಯಕ್ಷರ ಆದೇಶ ಮೇರೆಗೆ ಈ ಸೈಟನ್ನು ಇಂಥವರಿಗೆ ಮಂಜೂರು ಮಾಡಿದೆ ಎಂದು ಹೇಳಿ ಕೊಟ್ಟುಬಿಡುವುದು, ಆಮೇಲೆ ಮುಂದಿನ ವ್ಯವಹಾರವನ್ನು ಮುನಿಸಿಪಾಲ್ಟಿ ಪ್ರೆಸಿಡೆಂಟರು ಮತ್ತು ಮೆಂಬರುಗಳು, ಅಧಿಕಾರಿಗಳು ಒಟ್ಟಿಗೆ ವ್ಯವಹಾರವನ್ನು ಮಾಡಿಕೊಳ್ಳುವುದು ಈ ರೀತಿ ನಡೆಯುತ್ತಿದೆ. ಕಾನೂನು

ಏನಿದೆ ಎಂದರೆ ಸೈಟನ್ನು ಕೊಡಬಹುದು ಎಂದು ರೆಸಲ್ಯೂಷನ್ ಮಾಡಿದರೂ ಕೂಡ ಅದು ಸರ್ಕಾರ ಅಪ್ರೂವಲ್ ಆಗದೆ ಮಂಜೂರಾತಿ ಎಫೆಕ್ಟೀವ್ಗೆ ಬರುವುದಿಲ್ಲ. ಸರ್ಕಾರದ ಮಂಜೂರಾತಿ ಇಲ್ಲದೇ ಇಂಥ ನೂರಾರು ಸೈಟುಗಳನ್ನು ಹಾಸನ ಮುನಿಸಿಪಾಲಿಟಿಯವರು ಖಾಸಗಿಯವರಿಗೆ ವ್ಯವಹಾರಿಕವಾಗಿ ಮಾರಾಟ ಮಾಡಿಬಿಟ್ಟಿದ್ದಾರೆ. ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕಂಥ ನೂರಾರು ಸೈಟುಗಳ ಬಗ್ಗೆ ಈ ರೀತಿಯಾಗಿ ದುರ್ವವಹಾರ ಮಾಡಿರುತ್ತಾರೆ.

ನಾನು ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ ಇಂಥ ಸೈಟುಗಳು ಎಷ್ಟೆಷ್ಟು ಹಣಕ್ಕೆ ಅಕ್ರಮವಾಗಿ ಪರಭಾರೆಯಾಗಿರುತ್ತವೆಯೋ ಅವುಗಳನ್ನು ಕ್ಯಾನ್ಸಲ್ ಮಾಡದೆ ಹೋದರೆ ಅವರು ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಅಥವಾ ಇನ್ನೊಂದು ಮಾಡುತ್ತಾರೆ. ಅಥವಾ ಇನ್ಯಾರಾದರೂ ಗೊತ್ತಿಲ್ಲದವರಿಗೆ ಮಾರಾಟ ಮಾಡುತ್ತಾರೆ. ಇವರು ಮಾಡಿರತಕ್ಕಂಥ ಅವಿವೇಕಕ್ಕೆ ಯಾವನೋ ನಿರಪರಾಧಿ ಬಲಿಯಾಗಬೇಕಾಗಬರುತ್ತದೆ. ಈ ರೀತಿ ಅಕ್ರಮವಾಗಿ ಕೊಂಡುಕೊಂಡ ಸೈಟನ್ನು ಇನ್ನೂಬ್ಬರಿಗೆ ಮಾರಾಟ ಮಾಡಿದರೆ ಅವನಿಗೆ ಸೈಟೂ ಇಲ್ಲದೆ ಮನೆಯೂ ಇಲ್ಲದಂತೆ ಆಗುತ್ತದೆ. ಇದೆಲ್ಲವನ್ನೂ ತಪ್ಪಿಸುವ ದೃಷ್ಟಿಯಿಂದ ಮಾನ್ಯ ಸಚಿವರನ್ನು ಈ ಸದನದ ಮುಖಾಂತರ ಒತ್ತಾಯ ಮಾಡುತ್ತೇನೆ, ತಕ್ಷಣ ತನಿಖೆ ಮಾಡಿಸಿ, ಸರ್ಕಾರದ ಅಪ್ರೂವಲ್ ಇಲ್ಲದೆ ಎಷ್ಟು ಸೈಟುಗಳು ಪರಭಾರೆಯಾಗಿರುತ್ತವೆಯೋ ಅವುಗಳನ್ನು ಕ್ಯಾನ್ಸಲ್ ಮಾಡಿಸುವುದಕ್ಕೆ ಎಷ್ಟು ದಿವಸಗಳಲ್ಲಿ ಕ್ರಮ ತೆಗೆದುಕೊಳ್ಳುತ್ತಾರೆಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾವು ಕೂಲಂಕುಶವಾಗಿ ಸಿ.ಓ.ಡಿ ತನಿಖೆಗೆ ಹಾಕಿದಮೇಲೆ ಅವರು ಯಾವ ರೀತಿ ಸೂಚನೆ ಕೊಡುತ್ತಾರೋ ಅದರಂತೆ ನಡೆದುಕೊಳ್ಳಲು ಇವತ್ತೇ ಫೈಲನ್ನು ರೆಫರ್ ಮಾಡುತ್ತೇನೆ, ಅವರು ಕೊಟ್ಟ ಸೂಚನೆಯಂತೆ ಕ್ರಮ ತೆಗೆದುಕೊಳ್ಳಲು ರೆಡಿಯಾಗಿದ್ದೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೇ, ಇನ್ನೊಂದು ನನ್ನ ಕೊನೆಯ ಪ್ರಶ್ನೆ, ಈ ಹಾಸನ ಮುನಿಸಿಪಾಲ್ಟಿಯವರು ಹೈಕೋರ್ಟಿಗೆ ರಿಟ್ ಹೋಗಿದ್ದಾರೆ. ತಾವು ಜನರಿಗೆ ಬೇಕಾದಂಥ ಘನಕಾರ್ಯಗಳನ್ನು ಮಾಡಿದ್ದೇವೆ, ಜನೋಪಕಾರಿ ಕೆಲಸಗಳನ್ನು ಮಾಡಿದ್ದೇವೆ, ಸರ್ಕಾರದವರು ಸೂಪರ್ಸೀಡ್ ಮಾಡಿ ಬಹಳ ಅನ್ಯಾಯ ಮಾಡಿ ನಮ್ಮ ಸ್ವಾತಂತ್ರಕ್ಕೆ ಅನ್ಯಾಯ ಮಾಡಿದ್ದಾರೆಂದು ಕೋರ್ಟಿಗೆ ಹೋಗಿದ್ದಾರೆ. ಇಲ್ಲಿಯವರೆಗೆ 5-6 ಹಿಯರಿಂಗ್ ಹೈಕೋರ್ಟಿನಲ್ಲಿ ಆಗಿದೆ, ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ, ಏನೇನು ದುರ್ವವಹಾರ ನಡೆಯಿತು. ಯಾರು ಯಾರು ಇದರಲ್ಲಿ ಭಾಗಿಯಾಗಿದ್ದಾರೆಂಬುದು ನನಗೆ ಗೊತ್ತಿಲ್ಲ. ಈ ಕೇಸಿಗೆ ಗೌವರ್ನಮೆಂಟ್ ಲಾಯರ್ ಹಾಜರಾಗಿಲ್ಲ. ಈ ರಿಟ್ ಫಿಟೀಷನ್ಗೆ ಕಳೆದ ಸಾರಿ ಹಿಯರಿಂಗ್ನಲ್ಲಿ ಎಕ್ಸೆಪಾರ್ಟಿ ಡಿಕ್ರಿ ಕೊಡಬೇಕೆಂಬ ಮಟ್ಟಕ್ಕೆ ಬರಲಾಗಿದೆ ಎಂದು ಹೈಕೋರ್ಟ್ ಜಡ್ರವರು ಹೇಳಿದರಂತೆ. ಮಾನ್ಯ ಸಚಿವರನ್ನು ಕೇಳಲಿಕ್ಕೆ ಇಚ್ಛಿಪಡುತ್ತೇನೆ, ಇದಕ್ಕೆ ಸಂಬಂಧಪಟ್ಟಂತೆ ನೋಡತಕ್ಕಂಥ ಅಧಿಕಾರಿ ನಿಮ್ಮಲ್ಲಿ ಇಲ್ಲವೇ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಕೊಟ್ಟು ಗೌವರ್ನಮೆಂಟ್ ಪ್ಲೀಡರುಗಳನ್ನು ನೇಮಿಸಿಕೊಂಡಿರುವಾಗ ಅವರ್ಯಾರೂ ಈ ಕೇಸ್ ಬಗ್ಗೆ ವಿತಕ್ಕೆ ಹಾಜರಾಗಲಿಲ್ಲ? ಅವರು ಹಾಜರಾಗದೆ ಇರಲು ಏನು ಕಾರಣ?

ಏನು ಉಪಕಾರ ಯಾರಿಂದ ಪಡೆದಿದ್ದಾರೆ? ಈ ದೇಶದಲ್ಲಿ ಹೇಳುವವರು ಕೇಳುವವರು ಹಾಗೂ ಕಾನೂನು ಕಟ್ಟಲೆ ಏನೂ ಇಲ್ಲವೆ? ಇದಕ್ಕೆಲ್ಲಾ ಜವಾಬ್ದಾರರು ಯಾರು? ಮಾನ್ಯ ಸಚಿವರು ಇದರ ಬಗ್ಗೆ ಸರಿಯಾದ ಉತ್ತರ ಹೇಳಬೇಕು. ಯಾರು ಇದಕ್ಕೆ ಹೊಣೆಯಾಗಿದ್ದಾರೆ, ಯಾರು ಅನ್ಯಾಯಕ್ಕೆ ಒಳಗಾಗಿದ್ದಾರೆ ಎಂಬುದನ್ನು

ಸರ್ಕಾರ ಹೇಳಬೇಕು. ನಿಮ್ಮ ಲಾಯರ್, ಅಡ್ವೊಕೇಟ್ ಜನರಲ್ ಯಾರೋ ಗೊತ್ತಿಲ್ಲ. ಇವರ ಕೈಕೆಳಗೆ ಇರತಕ್ಕ ಅಧಿಕಾರಿ ಯಾರು ಎಂದು ಗೊತ್ತಿಲ್ಲ. ಇದರ ಬಗ್ಗೆ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳುವುದರ ಜೊತೆಗೆ 10ನೇ ತಾರೀಖು ಹಿಯರಿಂಗ್ ಇದೆ ಎಂದು ಕೇಳಿದೆ. ಅವತ್ತು ಯಾರಾದರೂ ಗವರ್ನಮೆಂಟ್ ಪ್ಲೀಡರ್ ಹಾಜರಾಗುವುದಕ್ಕೆ ಡೈರೆಕ್ಷನ್ ಕೊಡುತ್ತೀರಾ? ಕೊಡುವ ಶಕ್ತಿ ತಮಗೆ ಇದೆಯೇ? ಅಡ್ವೊಕೇಟ್ ಜನರಲ್, ದೊಡ್ಡ ದೊಡ್ಡ ಲಾಯರುಗಳು ಇವರ ಮಾತಿಗೆ ಬೆಲೆ ಕೊಟ್ಟು ಹಾಜರಾಗುತ್ತಾರೋ ಇಲ್ಲವೋ ಹೇಳಬೇಕು.

ಶ್ರೀ ಚೌಡರೆಡ್ಡಿ : ತಾವು 3 ದಿನಗಳ ಹಿಂದೆ ಬಂದು ಈ ರೀತಿ ಆಗಿದೆ ಎಂದು ತಿಳಿಸಿದರು. ತಕ್ಷಣ ನಾನು ಅಧಿಕಾರಿಗಳ ಜೊತೆ ಮಾತನಾಡಿದೆ. ಅವರು ಪ್ಯಾರಾವೈಸ್ ರಿಮಾರ್ಕ್ಸ್ ಎಲ್ಲಾ ಕೊಟ್ಟಿದ್ದೇವೆಂದು ಹೇಳಿದರು. ಹೈಕೋರ್ಟಿನಲ್ಲಿ ಯಾವ ವಕೀಲರೂ ಹಾಜರಾಗಿಲ್ಲವೆಂದು ಹೇಳಿದರು. ನಾನು ಅಡ್ವೊಕೇಟ್ ಜನರಲ್ ಜೊತೆ ಮಾತನಾಡಿದೆ. ಏನಾಗಿದೆ ಎಂದು ಕೇಳಿದ್ದಕ್ಕೆ ಹತ್ತನೇ ತಾರೀಖು ಹಾಜರಾಗುವಂತೆ ವ್ಯವಸ್ಥೆ ಮಾಡುತ್ತೇನೆಂದರು. ಕೂಲಂಕಷವಾಗಿ ಬರೆಯಿರಿ, ಯಾವ ಅಡ್ವೊಕೇಟ್ ಅನ್ನು ನಾವು ಕಳುಹಿಸಿದ್ದೇವೆ ಅವರು ಏತಕ್ಕೆ ಹಾಜರಾಗಲಿಲ್ಲ, ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ನಾನು ಲಾ ಮಿನಿಸ್ಟರಿಗೆ ಇದರ ಬಗ್ಗೆ ಬರೆಯುತ್ತಿದ್ದೇನೆ. ನಮ್ಮ ಅಧಿಕಾರ ವರ್ಗದವರು ಪ್ಯಾರಾವೈಸ್ ರಿಮಾರ್ಕ್ಸ್ ಕೊಟ್ಟಿದ್ದೇವೆಂದು ಹೇಳಿದರು. ಅವರಿಗೂ ನಾನು ನೋಟೀಸ್ ಕೊಟ್ಟು ಕಾನೂನು ಪ್ರಕಾರ ಯಾರೇ ಆಗಲಿ ನಾನು ಕೇರ್ ಮಾಡದೆ ಕ್ರಮ ತೆಗೆದುಕೊಳ್ಳುತ್ತೇನೆ. ತಾವು ಹೇಳಿದ ತಕ್ಷಣ ನಾನು ಈ ಬಗ್ಗೆ ಕ್ರಮ ತೆಗೆದುಕೊಂಡಿದ್ದೇನೆ.

ಬನ್ನಡ್ಕ ಕುಶಲಕರ್ಮಿ ತರಬೇತಿ ಸಂಸ್ಥೆ ಕುರಿತು

280 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬನ್ನಡ್ಕ ಕುಶಲಕರ್ಮಿ ತರಬೇತಿ ಸಂಸ್ಥೆ, ಮೂಡಬಿದ್ರೆಯಲ್ಲಿ ಯಾವ ವಿಧದ ತರಬೇತಿಯನ್ನು ಕೊಡಲಾಗುತ್ತಿದೆ?

ಆ) ಹಳ್ಳಿಯ ವಲಯದ ಜನರಿಗೆ ಅನುಕೂಲವಾಗಿರುವ ಈ ತರಬೇತಿ ಸಂಸ್ಥೆಯಲ್ಲಿ ಪ್ರತಿ ವಿಭಾಗದಲ್ಲಿ ಎಷ್ಟೆಷ್ಟು ಜನರು ತರಬೇತಿ ಪಡೆಯುತ್ತಿರುವರು?

ಇ) ಈ ತರಬೇತಿ ಸಂಸ್ಥೆಯಿಂದ ಜನರು ಪೂರ್ಣ ಪ್ರಯೋಜನ ಪಡೆಯದಿರಲು ಇರುವ ತೊಂದರೆ ಏನು?

ಈ) ಪಟ್ಟಣದಲ್ಲಿಯೇ ಕೇಂದ್ರೀಕರಿಸುವ ಉದ್ದೇಶದಿಂದ ಈ ಕೇಂದ್ರವನ್ನು ಸ್ಥಳಾಂತರಿಸುವ ಆಲೋಚನೆ ಇದೆಯೇ?

ಉ) ಉಪ ವಸ್ತುಗಳನ್ನು ತಯಾರಿಸುವ ಕೇಂದ್ರದ ಯಂತ್ರೋಪಕರಣಗಳು ಏನಾಗಿದೆ?

ಊ) ಇಲ್ಲಿರುವ ವಿದ್ಯಾರ್ಥಿನಿಲಯ ತರಬೇತಿ ನೀಡುವ ಕಟ್ಟಡಗಳು ಯಂತ್ರೋಪಕರಣಗಳು ಸಾಕಷ್ಟು ಇದ್ದರೂ ತರಬೇತಿಯ ಪೂರ್ಣ ಪ್ರಯೋಜನ ಜನತೆಗೆ ಸಿಗದಿರಲು ಕಾರಣವೇನು?

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ (ಸಣ್ಣ ಪ್ರಮಾಣದ ಕೈಗಾರಿಕೆಗಳ ಸಚಿವರು): ಅ) ಮೂಡಬಿದರೆ ಬನ್ನಡ್ಕ ಕೈಗಾರಿಕಾ ಕುಶಲಕರ್ಮಿ ತರಬೇತಿ ಸಂಸ್ಥೆಯಲ್ಲಿ ಈ ಕೆಳಕಂಡ ವೃತ್ತಿಗಳಲ್ಲಿ ತರಬೇತಿ ನೀಡಲಾಗುತ್ತಿದೆ.

(1) ವಿದ್ಯುತ್ ಶಿಲ್ಪ

(2) ಮರಗೆಲಸ